**ವಿಷಯ** ಗ್ರಾ.ಕು.ನೀ.& ನೈ. ಇಲಾಖೆಗೆ ವೃಂದ & ನೇಮ
ಕಾತಿ ನಿಯಮಗಳನ್ನು ರಚಿಸುವ ಬಗ್ಗೆ
**ಗ್ರಾಅಪ** 15 ಇಡಿಕೆಕ 2017

1) ಅತ್ಯಂತ ಪ್ರಾಮುಖ್ಯ ವಿಭಾಗವಾದ ಕುಡಿಯುವ ನೀರು ಮತ್ತು ನೈರ್ಮಲ್ಯ ಘಟಕವನ್ನು ಸದೃಢಗೊಳಿಸಲು, ರಾಜ್ಯದ ಗ್ರಾಮೀಣ ಜನವಸತಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಸುರಕ್ಷಿತ ಕುಡಿಯುವ ನೀರಿನ ವ್ಯವಸ್ಥೆಯನ್ನು ಸಮರ್ಪಕವಾಗಿ ಕಲ್ಪಿಸುವ ಮತ್ತು ನೀರಿನ ಗುಣಮಟ್ಟದ ಸಮಸ್ಯೆಯಿರುವ ಜನವಸತಿಗಳಿಗೆ ಶಾಶ್ವತ ಯೋಜನೆಗಳನ್ನು ಅನುಷ್ಠಾನಗೊಳಿಸುವ ಅನಿವಾರ್ಯತೆಯಿರುವುದರಿಂದ ಸರ್ಕಾರದ ಆದೇಶ ದಿನಾಂಕ 04.03.2014ರಲ್ಲಿ ರಾಜ್ಯ ಮತ್ತು ಕೇಂದ್ರ ವಲಯಗಳಡಿ ಹಾಗೂ ವಿದೇಶಿ ನೆರವಿನ ಯೋಜನೆಯಡಿ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಗಳ ಕಾಲಮಿತಿ ಅನುಷ್ಠಾನ ಮತ್ತು ಸಮರ್ಪಕ ನಿರ್ವಹಣೆ ಹಾಗೂ ನೈರ್ಮಲ್ಯ ಘಟಕವನ್ನು ಸದೃಢಗೊಳಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನಕ್ಕೊಳಪಡುವ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯನ್ನು ದಿನಾಂಕ 01.04.2014ರಿಂದ ಅಸ್ತಿತ್ವಕ್ಕೆ ಬರುವಂತೆ ಸೃಜಿಸಿ, ಸದರಿ ಇಲಾಖೆಯ ಆಯುಕ್ತರ ಕಚೇರಿ, ಕೇಂದ್ರ ಕಚೇರಿ ವೃತ್ತ, ವಿಭಾಗ ಮತ್ತು ಉಪವಿಭಾಗ ಕಚೇರಿಗಳಿಗೆ ವಿವಿಧ ವೃಂದಗಳ ಹುದ್ದೆಗಳನ್ನು ಮಂಜೂರು / ಹಂಚಿಕೆ ಮಾಡಲಾಗಿದೆ(ಪುಟ 28-9).

2) ನಂತರ ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 166 ಜಿಪಅ 2015(2) ದಿನಾಂಕ 04.08.2015ರ ಪ್ರಕಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ವಿವಿಧ ವೃಂದದಲ್ಲಿ ಒಟ್ಟು 2872 ಹುದ್ದೆಗಳು ಮಂಜೂರಾಗಿರುತ್ತವೆ (ಪುಟ 46-39).

3) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಪ್ರತ್ಯೇಕ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿಲ್ಲದ ಕಾರಣ, ಈ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಹಾಗಾಗಿ ಬಹಳಷ್ಟು ಹುದ್ದೆಗಳು ಖಾಲಿ ಇದ್ದು, ಪ್ರಸ್ತುತ ಲೋಕೋಪಯೋಗಿ ಇಲಾಖೆಯ ಸೇವೆಗೆ ಸೇರಿದ ಅಧಿಕಾರಿ / ನೌಕರರುಗಳು ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದಾರೆ. ರಾಜ್ಯ ಮತ್ತು ಕೇಂದ್ರ ವಲಯಗಳಡಿ ಹಾಗೂ ವಿದೇಶಿ ನೆರವಿನ ಯೋಜನೆಯಡಿ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಗಳ ಕಾಲಮಿತಿ ಅನುಷ್ಠಾನ ಹಾಗೂ ಆಡಳಿತಾತ್ಮಕ ಮತ್ತು ತಾಂತ್ರಿಕ ಕೆಲಸಗಳ ಸಮರ್ಪಕ ನಿರ್ವಹಣೆಗೆ ತೊಂದರೆ ಉಂಟಾಗುತ್ತಿರುವುದು ಗಮನಕ್ಕೆ ಬಂದ ಕಾರಣ ಸದರಿ ಇಲಾಖೆಗೆ ಪ್ರತ್ಯೇಕ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲು ಸರ್ಕಾರವು ತೀರ್ಮಾನಿಸಿ ಅದರಂತೆ ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 138 ಸ್ವೀಮರ 2016, ದಿನಾಂಕ 20.09.2016ರಲ್ಲಿ ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು(ಪುಟ 49-47). ಸದರಿ ಸಮಿತಿಯು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಸಂಬಂಧಿಸಿದಂತೆ ಕರಡು ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲು ಸಭೆಯನ್ನು ನಡೆಸಿರುತ್ತದೆ. ಗ್ರಾಮೀಣ ಕುಡಿಯುವ ನೀರು

**ವಿಷಯ**

**ಗ್ರಾಅಪ** 15| ಶಾಖೆ| 2017

(ಹಿ.ಪುಟದಿಂದ)

ಮತ್ತು ನೈರ್ಮಲ್ಯ ಇಲಾಖೆಗೆ ಸಂಬಂಧಿಸಿದಂತೆ ಕರಡು ವೃಂದ ಮತ್ತು ನೇಮಕಾತಿ ನಿಯಮಗಳ ಕರಡನ್ನು ಪುಟ 74–69ರಲ್ಲಿರಿಸಿದೆ.

3) ಸಿಆಸುಇಲಾಖೆಯು ದಿನಾಂಕ 08.04.2014ರ ಆದೇಶದಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವಾಗ ಅನುಸರಿಸಬೇಕಾದ ವಿಧಿ ವಿಧಾನಗಳನ್ನು ತಿಳಿಸಿರುತ್ತದೆ(ಪುಟ 68–50). ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ವೃಂದ ಮತ್ತು ನಿಯಮಗಳ ಕರಡನ್ನು ರಚಿಸುವ ಸಂಬಂಧ ನೀಡಿರುವ ಮಾರ್ಗಸೂಚಿಗಳನ್ವಯ ವೃಂದ ಮತ್ತು ನೇಮಕಾತಿ ನಿಯಮಗಳ ಕರಡನ್ನು ಆರ್ಥಿಕ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಗಳೊಂದಿಗೆ ಸಮಾಲೋಚಿಸಿದ ನಂತರ ಅದನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯ ವೃಂದ ಪರಿಶೀಲನಾ ಉಪಸಮಿತಿಯ ಮುಂದೆ ಮಂಡಿಸಬೇಕಾಗುತ್ತದೆ.

4) ಆದ್ದರಿಂದ, ಹಾಲಿ ರಚಿಸಲು ಉದ್ದೇಶಿಸಿರುವ ಕರಡು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅನುಮೋದನೆಯನ್ನು ಪಡೆದು ನಂತರ ಕಂಡಿಕೆ (3)ರಲ್ಲಿ ವಿವರಿಸಿರುವಂತೆ ನಿಗಧಿತ ವಿಧಿವಿಧಾನಗಳನ್ನು ಅನುಸರಿಸಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ ಬಗ್ಗೆ ಮುಂದಿನ ಕ್ರಮ ವಹಿಸಬಹುದಾಗಿದೆ. ಆದೇಶಕ್ಕಾಗಿ.

29/5/17

(5) [illegible]

(6) ಕಂಡಿಕೆ 1 ರಿಂದ 3 [illegible]

ವಿಷಯ: ಗ್ರಾ.ಕು.ನೀ.ಮತ್ತು ನೈ ಇಲಾಖೆಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ ಬಗ್ಗೆ.

ಸಂಖ್ಯೆ : ಗ್ರಾಅಪ : 151 ಸೇಇಆ 17

7. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 166 ಜಿಪಅ 15 (2) ದಿನಾಂಕ: 04.08.2015ರ ಪ್ರಕಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಒಟ್ಟು 20 ವೃಂದಗಳಲ್ಲಿ 2872 ಹುದ್ದೆಗಳನ್ನು ಮಂಜೂರು ಮಾಡಲಾಗಿದೆ. ಈ ಎಲ್ಲಾ ಹುದ್ದೆಗಳು ಶಾಶ್ವತ ಹುದ್ದೆಗಳಾಗಿರುತ್ತವೆ. ಗ್ರಾ.ಅ.ಪಂ.ರಾಜ್ ಇಲಾಖೆಯತ ಬಹು ಪ್ರಮುಖ ಯೋಜನೆಗಳ ಪೈಕಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಯನ್ನು ಅನುಷ್ಠಾನಗೊಳಿಸುವುದೂ ಸಹ ಒಂದು ಆಗಿರುತ್ತದೆ. ಪ್ರಸ್ತುತ ಈ ಇಲಾಖೆಗೆ ಮಂಜೂರಾದ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳು ಇಲ್ಲದ ಕಾರಣ ಎಲ್ಲಾ ವೃಂದದ ಹುದ್ದೆಗಳನ್ನು ವಿವಿಧ ಇಲಾಖೆಗಳಿಂದ ಅಧಿಕಾರಿ / ನೌಕರರುಗಳನ್ನು ನಿಯೋಜನೆ ಮೇಲೆ ಪಡೆದು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

8. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರು ಸದರಿ ಇಲಾಖೆಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲು ಆದೇಶಿಸಿದ್ದರ ಅನುಸಾರ ಕರಡು ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಯಾರಿಸಿ ಪುಟ-74-69 ರಲ್ಲಿ ಇಡಲಾಗಿದ್ದು, ದಯವಿಟ್ಟು ಅವಗಾಹಿಸುವುದು. ಸದರಿ ಕರಡು ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಿ.ಆ.ಸು.ಇಲಾಖೆಯು ದಿನಾಂಕ: 08.04.2014ರ ಆದೇಶದಲ್ಲಿ ನಿಗದಿಪಡಿಸಿರುವ ವಿಧಿ ವಿಧಾನಗಳ ಅನುಸಾರ ಅಂತಿಮಗೊಳಿಸುವ ಪೂರ್ವದಲ್ಲಿ ಕರಡು ನಿಯಮಗಳನ್ನು ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಅವಗಾಹನೆಗೆ / ಆದೇಶಕ್ಕೆ ಸಲ್ಲಿಸಬಹುದು.

02/6/17

ಉಪ ಕಾರ್ಯದರ್ಶಿ (ಆ)
ಉ.ಕಾ. (ಆಡಳಿತ-1)
ಗ್ರಾ.ಅ.ಪಂ.ರಾಜ್ ಇಲಾಖೆ

Pr.Secy./RDPR No.1557 Dt. 05/6/17

9. ಪ್ರಧಾನ ಕಾರ್ಯದರ್ಶಿ ರವರು

ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರು

ಡಾ. ಎನ್. ನಾಗಾಂಬಿಕಾ ದೇವಿ, ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ

ಅನುಮೋದಿಸಿದೆ.

10/10.

ಹೆಚ್.ಕೆ.ಪಾಟೀಲ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಗ್ರಾ.ಅ. ಮತ್ತು ಪಂ.ರಾ. ಸಚಿವರ ಕಚೇರಿ
ಸಂಖ್ಯೆ: 3796
ಸ್ವೀಕೃತಿ ದಿ: 06.06.2017
ರವಾನೆ ದಿ: 10.10.2017

ವಿಷಯ

ಸಂಖ್ಯೆ : ಗ್ರಾಅಪ : 15/ಸೌಲಭ/17

ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು)